Draft.

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.100/2015

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 1.3.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: (1) ಶ್ರೀ. ಶಿವಕುಮಾರ್ ಮತ್ತು ಇತರರು, ಕೆಂಚನಹಳ್ಳಿಯ ನಿವಾಸಿಗಳು ಸಲ್ಲಿಸಿದ ದೂರಿನ ಬಗ್ಗೆ.

*******

Approved 1/3/18

ಶ್ರೀ. ಕೆ.ಶಿವಕುಮಾರ್, ಕೆ.ಎಸ್.ರಾಜಣ್ಣ ಮತ್ತು ನಾಗರಾಜು.ಕೆ.ಪಿ, ಕಂಚನಹಳ್ಳಿ ಗ್ರಾಮದ ನಿವಾಸಿಗಳು, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ಎಲ್.ಬಾಲಕೃಷ್ಣ, ಖಾಸಗಿ ವ್ಯಕ್ತಿ ಮತ್ತು (2) ಶ್ರೀ. ನಾಗಭೂಷಣ.ಎಲ್., ಹಿರಿಯ ಅಧಿಕಾರಿಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಮಂಡ್ಯ, (ಇನ್ನು ಮುಂದೆ ಕ್ರಮವಾಗಿ " 1 ಮತ್ತು 2ನೇ ಎದುರುದಾರರು " ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ, ಕಂಚನಹಳ್ಳಿ ಗ್ರಾಮದ ಸರ್ವೆ ನಂ.63ರ ಸರ್ಕಾರಿ ಗೋಮಾಳದಲ್ಲಿ 1ನೇ ಎದುರುದಾರರಾದ ಎಲ್. ಬಾಲಕೃಷ್ಣ ಬಿನ್ ಲೇಟ್ ಲಕ್ಕಣ್ಣಗೌಡ ಎನ್ನುವವರು ಹೊಸದಾಗಿ ರಂಗನಾಥ ಸ್ಟೋನ್ ಕ್ರಷರ್ ಘಟಕ ನಿರ್ಮಾಣ ಮಾಡಿ ಕಲ್ಲು ಗಣಿಗಾರಿಕೆಯನ್ನು ಸುಮಾರು 2007-08ನೇ ಇಸವಿಯಿಂದ ಲೈಸೆನ್ಸ್ ಇಲ್ಲದೆ ಅಕ್ರಮವಾಗಿ ನಡೆಸುತ್ತಿದ್ದು, ಸುತ್ತಮುತ್ತಲಿನ ಜಮೀನಿನ ಬೆಳೆಗಳಿಗೆ, ಕೊಳವೆ ಬಾವಿಗಳಿಗೆ, ದನಕರುಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ದೂರು ನೀಡಿದ್ದರೂ 2ನೇ ಎದುರುದಾರರು ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

3. ದೂರಿಗೆ ಸಂಬಂಧಿಸಿದಂತೆ ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಡ್ಯ ರವರ ದಿ.20.3.2017ರ ಪತ್ರದ ರೀತ್ಯಾ ತಮ್ಮ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ ಯಾವುದೇ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಕಂಡುಬಂದಿರುವುದಿಲ್ಲ. ಸುತ್ತಮುತ್ತಲಿನ ಗ್ರಾಮಸ್ಥರನ್ನು ವಿಚಾರಿಸಲಾಗಿ ಸುಮಾರು $1^{1/2}$ –2 ವರ್ಷಗಳಿಂದ ಸದರಿ ಸ್ಥಳದಲ್ಲಿ ಯಾವುದೇ ಕಲ್ಲುಗಣಿಗಾರಿಕೆ ನಡೆಯುತ್ತಿರುವುದಿಲ್ಲವೆಂದು ತಿಳಿದುಬಂದಿರುತ್ತದೆಂದು ತಿಳಿಸಿರುತ್ತಾರೆ.

4. ದಿ.19.1.2018ರಂದು ಪಾಂಡವಪುರ ಕ್ಯಾಂಪಿನಲ್ಲಿ ದೂರುದಾರರು ಮತ್ತು 2ನೇ ಎದುರುದಾರರು ಹಾಜರಾಗಿದ್ದು, ದೂರುದಾರರು ಇನ್ನೂ ಕೆಂಚನಹಳ್ಳಿಯ ಸ.ನಂ.63ರಲ್ಲಿ 1ನೇ ಎದುರುದಾರರು ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮಾಡುತ್ತಿದ್ದಾರೆ, 2ನೇ ಎದುರುದಾರರಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮಕೈಗೊಳ್ಳುತ್ತಿಲ್ಲವೆಂದು ಹೇಳಿ ಸ್ಥಳದ 4 ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದರು. ಸದರಿ ಛಾಯಾಚಿತ್ರಗಳನ್ನು ನೋಡಿದರೆ ಹೊಸದಾಗಿ ಕಲ್ಲು ಗಣಿಗಾರಿಕೆ ಮಾಢುತ್ತಿರುವುದು ಕಂಡುಬರುತ್ತಿದೆ. ದೂರುದಾರರು 2ನೇ ಎದುರುದಾರರ ವಿರುದ್ಧ ಗಂಭೀರವಾಗಿ ಆಪಾದನೆ ಮಾಡಿದ್ದು ಆ ಸಮಯದಲ್ಲಿ 2ನೇ ಎದುರುದಾರರು ಸಮಂಜಸವಾದ ಉತ್ತರ ಕೊಡಲು ವಿಫಲರಾಗಿದ್ದರಿಂದ 2ನೇ ಎದುರುದಾರರಿಗೆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ಎಷ್ಟು ಪ್ರಮಾಣದ ಕಲ್ಲು ಗಣಿಗಾರಿಕೆ ನಡೆದಿರುತ್ತದೆ ಮತ್ತು ಸದರಿ ಕಲ್ಲು ಗಣಿಗಾರಿಕೆಯನ್ನು ತಡೆಯಲು ಏನು ಕ್ರಮಕೈಗೊಂಡಿದ್ದರು ಎಂಬುದರ ಬಗ್ಗೆ ವಿಸ್ತಾರವಾದ ವರದಿ ನೀಡಲು ಆದೇಶ ಮಾಡಲಾಗಿತ್ತು. ಅದರಂತೆ 2ನೇ ಎದುರುದಾರರು ವರದಿ ಸಲ್ಲಿಸಿರುತ್ತಾರೆ.

5. 2ನೇ ಎದುರುದಾರರು ತಮ್ಮ ವರದಿಯಲ್ಲಿ ದಿ.19.1.2018ರಂದು ಪಾಂಡವಪುರ ತಾಲ್ಲೂಕಿನಲ್ಲಿ ನೀಡಿದ ಸೂಚನೆಯಂತೆ ದಿ.3.2.2018ರಂದು ನಾಗಮಂಗಲ ತಹಶೀಲ್ದಾರ್ ಕಛೇರಿಯ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರು ಹಾಗೂ ಈ ಕಛೇರಿಯ ತಾಂತ್ರಿಕ ಅಧಿಕಾರಿಗಳು ಮತ್ತು ದೂರುದಾರರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಕೆಂಚನಹಳ್ಳಿ ಗ್ರಾಮದ ಸ.ನಂ.63ರ ಪ್ರದೇಶದವು ಈ ಹಿಂದೆ ಕೆಂಚನಹಳ್ಳಿ ಗ್ರಾಮಸ್ಥರ ದೂರಿನ ಹಿನ್ನೆಲೆಯಲ್ಲಿ ಭೇಟಿ ನೀಡಿ ನಿರ್ಮಾಣ ಹಂತದಲ್ಲಿದ್ದ ಕ್ರಷರ್ ಘಟಕವನ್ನು ತಡೆಹಿಡಿದ ಪ್ರದೇಶವಾಗಿದ್ದು, ಕ್ರಷರ್ ಘಟಕ ತೆರವುಗೊಂಡಿದ್ದು, ಯಾವುದೇ ಕಾಮಗಾರಿಗಳೂ ಮುಂದುವರೆದ ಕುರುಹುಗಳು ಇರುವುದಿಲ್ಲ, ಹತ್ತಿರದಲ್ಲಿ ಅಲ್ಲಲ್ಲಿ ಚದುರಿದಂತೆ ಕಟ್ಟಡ ಕಲ್ಲಿಗಾಗಿ ಈ ಹಿಂದೆ ನಡೆದಿರುವ ಗಣಿಗಾರಿಕೆ ಹೊಂಡದ ಆಳವು ಅಂದಾಜು 8236 ಮೆ.ಟನ್ ಗಳ ಪ್ರಮಾಣದಷ್ಟು ಕಟ್ಟಡ ಕಲ್ಲು ಗಣಿಗಾರಿಕೆ ನಡೆದಿರುವುದಾಗಿಯೂ ಸದರಿ ಕಲ್ಲು ಗಣಿಗಾರಿಕೆಯನ್ನು ದೂರುದಾರರ ದೂರಿನಂತೆ ಅನಧಿಕೃತವೆಂದು

ಪರಿಗಣಿಸಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ತಿದ್ದುಪಡಿ ನಿಯಮ 2017ರ ನಿಯಮ 44(3)ರನ್ವಯ ರೂ.24,70,800/- ದಂಡವನ್ನು ವಿಧಿಸಿದ್ದು, ಸದರಿ ದಂಡದ ಮೊತ್ತವನ್ನು ನೋಟೀಸು ತಲುಪಿದ 7 ದಿನಗಳೊಳಗಾಗಿ ಪಾವತಿಸಲು ಸೂಚಿಸಲಾಗಿರುತ್ತದೆಂದು ತಿಳಿಸಿರುತ್ತಾರೆ.

6. ದೂರುದಾರರು ಸಲ್ಲಿಸಿರುವ ದೂರು, ತನಿಖಾ ವರದಿ ಮತ್ತು 2ನೇ ಎದುರುದಾರರು ಸಲ್ಲಿಸಿದ ವರದಿಗಳನ್ನು ಪರಿಶೀಲಿಸಿದಾಗ ದೂರುದಾರರು ದೂರಿನಲ್ಲಿ 1ನೇ ಎದುರುದಾರರು ಕೆಂಚನಹಳ್ಳಿ ಗ್ರಾಮದ ಸ.ನಂ.63 ಸರ್ಕಾರಿ ಗೋಮಾಳದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದಾರೆಂದು ಮತ್ತು 2ನೇ ಎದುರುದಾರರಿಗೆ ದೂರು ನೀಡಿದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ಗಂಭೀರವಾದ ಆಪಾದನೆಗಳನ್ನು ಮಾಡಿ ಸಲ್ಲಿಸಿದ ದೂರಿನ ಮೇರೆಗೆ ತನಿಖೆಗಾಗಿ ಡಿಎಸ್.ಪಿ,ಕರ್ನಾಟಕ ಲೋಕಾಯುಕ್ತ, ಮಂಡ್ಯ, ಇವರಿಗೆ ವಹಿಸಿದ್ದು, ಸದರಿಯವರು ತನಿಖೆ ಮಾಡಿ ವರದಿ ಸಲ್ಲಿಸಿ ದೂರುದಾರರು ಮಾಡಿದ ಆಪಾದನೆಗಳು ಸಾಬೀತಾಗಿಲ್ಲವೆಂದು ತಿಳಿಸಿರುತ್ತಾರೆ. ಆದರೆ ದೂರುದಾರರು ಪುನ: ಪಾಂಡವಪುರ ಕ್ಯಾಂಪಿನಲ್ಲಿ ಬಂದು ಈವರೆಗೂ 1ನೇ ಎದುರುದಾರರು ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮಾಡುತ್ತಿದ್ದಾರೆಂದು ಆಪಾದಿಸಿದ್ದರಿಂದ, 2ನೇ ಎದುರುದಾರರಿಗೆ ಪರಿಶೀಲಿಸಿ ವರದಿ ಸಲ್ಲಿಸಲು ತಿಳಿಸಿದಾಗ 2ನೇ ಎದುರುದಾರರು ತಮ್ಮ ವರದಿ ಸಲ್ಲಿಸಿದ್ದಾರೆ. ಕರ್ನಾಟಕ ಲೋಕಾಯುಕ್ತ ಪೋಲೀಸರು ತನಿಖೆ ಮಾಡುವ ಸಮಯದಲ್ಲಿ 2ನೇ ಎದುರುದಾರರು ವಿಸ್ತ್ರತವಾದ ದಿ.16.3.2017ರ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿ ಮತ್ತು ದಿ.19.2.2018ರಂದು ಈ ಕಛೇರಿಗೆ ನೀಡಿದ ವರದಿಯ ಅಂಶಗಳು ಒಂದೇ ಇದ್ದು, 2ನೇ ಎದುರುದಾರರು ಸ್ಥಳಕ್ಕೆ ಖುದ್ದಾಗಿ ಹೋಗಿ ಪರಿಶೀಲನೆ ಮಾಡಿದ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ತಮ್ಮ ಇಲಾಖೆಯ ತಾಂತ್ರಿಕ ಅಧಿಕಾರಿಗಳು ದೂರುದಾರರ ಸಮ್ಮುಖದಲ್ಲಿ ನಾಗಮಂಗಲ ತಾಲ್ಲೂಕಿನ ತಹಶೀಲ್ದಾರ್ ಕಛೇರಿಯ ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಿಗರು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ನೀಡಿರುವುದಾಗಿ ತಿಳಿಸಿ ದೂರುದಾರರ ದೂರಿನಂತೆ ಅನಧಿಕೃತವೆಂದು ಪರಿಗಣಿಸಿ 1ನೇ ಎದುರುದಾರರ ವಿರುದ್ಧ ದಂಡವನ್ನು ವಿಧಿಸಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು ಸುಮಾರು 8,236 ಮೆ.ಟನ್ ಗಳ ಪ್ರಮಾಣದಷ್ಟು ಕಲ್ಲು ಗಣಿಗಾರಿಕೆ ನಡೆದಿರುವುದಾಗಿ ತಿಳಿಸಿರುತ್ತಾರೆ. ಈ ಎಲ್ಲ ವಿಚಾರವನ್ನು 2ನೇ ಎದುರುದಾರರು ತಮ್ಮ ಕಛೇರಿಯ ತಾಂತ್ರಿಕ ಅಧಿಕಾರಿಗಳು ನೀಡಿದ ವರದಿಯ ಆಧಾರದ ಮೇಲೆ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಆದರೆ 2ನೇ ಎದುರುದಾರರು ತಮ್ಮ ತಾಂತ್ರಿಕ ಅಧಿಕಾರಿಗಳು ನೀಡಿದ ವರದಿಯ ಪ್ರತಿಯನ್ನು ಲಗತ್ತಿಸಿರುವುದಿಲ್ಲ.

7. ಈ ಹಿಂದೆ ಲೋಕಾಯುಕ್ತ ಪೋಲೀಸರ ಮುಂದೆ ದಿ.16.3.2017ರಂದು ನೀಡಿದ ವರದಿಯಲ್ಲಿ ಯಾವುದೇ ಕಲ್ಲು ಗಣಿಗಾರಿಕೆ ನಡೆದಿಲ್ಲವೆಂದು 2ನೇ ಎದುರುದಾರರು ಹೇಳಿರುತ್ತಾರೆ. ಆದರೆ ದಿ.5.2.2018ರ ವರದಿಯಲ್ಲಿ ಸುಮಾರು 8,236 ಮೆ.ಟನ್ ಗಳ ಪ್ರಮಾಣದಷ್ಟು ಕಲ್ಲು ಗಣಿಗಾರಿಕೆ ನಡೆದಿರುವುದಾಗಿ ತಿಳಿಸಿರುತ್ತಾರೆ. ಈ ಎರಡೂ ಹೇಳಿಕೆಗಳನ್ನು ಗಮನಿಸಿದರೆ 2ನೇ ಎದುರುದಾರರು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳದೆ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಪಾಲಿಸುತ್ತಿಲ್ಲವೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೆ ಲೋಕಾಯುಕ್ತ ಪೋಲೀಸರು ವರದಿ ನೀಡಿದ ನಂತರ ಸುಮಾರು ಬಾರಿ 2ನೇ ಎದುರುದಾರರಿಗೆ ಸ್ಥಳ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ನೋಟೀಸು ನೀಡಿದ್ದು ಸದರಿ ನೋಟೀಸು 2ನೇ ಎದುರುದಾರರಿಗೆ ಜಾರಿಯಾಗಿದ್ದರೂ ಸಹ 2ನೇ ಎದುರುದಾರರು ಯಾವುದೇ ವರದಿಯನ್ನು ನೀಡದೆ, ಆದೇಶವನ್ನು ಪಾಲಿಸದೆ, ತಮ್ಮ ತಾಂತ್ರಿಕ ಅಧಿಕಾರಿಗಳ ವರದಿಯನ್ನಾಧರಿಸಿ ವರದಿಯನ್ನು ನೀಡಿರುತ್ತಾರೆ. ದೂರುದಾರರು ಹಾಜರುಪಡಿಸಿದ ಛಾಯಾಚಿತ್ರಗಳಿಂದ ಹೊಸದಾಗಿ ಗಣಿಗಾರಿಕೆ ಮಾಡುತ್ತಿರುವುದು ಕಂಡುಬರುತ್ತದೆ. 1ನೇ ಎದುರುದಾರರಿಗೆ ಸದರಿ ಪ್ರದೇಶದಲ್ಲಿ 20 ಗುಂಟೆಯಲ್ಲಿ ಮಾತ್ರ ಕಲ್ಲು ಗಣಿಗಾರಿಕೆ ಮಾಡಲು 2006ರಲ್ಲಿ ಲೈಸೆನ್ಸ್ ನೀಡಲಾಗಿತ್ತು. ಸದರಿ ಲೈಸೆನ್ಸ್ ಅವಧಿ 5 ವರ್ಷಗಳವರೆಗೆ ಮಾತ್ರವಿದ್ದು, 1ನೇ ಎದುರುದಾರರ ಲೈಸೆನ್ಸ್ ಪುನ: ನವೀಕರಿಣಗೊಂಡಿರುವುದಿಲ್ಲ. 2014ರಿಂದೀಚೆಗೆ 1ನೇ ಎದುರುದಾರರು ಸರ್ಕಾರಿ ಗೋಮಾಳ ಜಮೀನಿನಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ಮಾಡಿರುವುದು ಸ್ಪಷ್ಟವಾಗಿ ಕಂಡು ಬಂದರೂ ಸಹ 2ನೇ ಎದುರುದಾರರು 1ನೇ ಎದುರುದಾರರ ವಿರುದ್ಧ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ದಿ.19.1.2018ರಂದು ಉಪಲೋಕಾಯುಕ್ತರು ನೀಡಿದ ಆದೇಶದ ನಂತರ 2ನೇ ಎದುರುದಾರರು 1ನೇ ಎದುರುದಾರರ ವಿರುದ್ಧ 24,70,800/- ರೂ.ಗಳ ದಂಡವನ್ನು ವಿಧಿಸಿರುವುದನ್ನು ನೋಡಿದರೆ 1ನೇ ಎದುರುದಾರರು ಈವರೆಗೂ ಕಲ್ಲು ಗಣಿಗಾರಿಕೆ ಮಾಡುತ್ತಿರುವುದು ಸಾಬೀತಾಗುತ್ತದೆ. ಈ ರೀತಿ ಅಕ್ರಮ ಗಣಿಗಾರಿಕೆ ಮಾಡಿದ್ದಕ್ಕೆ 1ನೇ ಎದುರುದಾರರ ವಿರುದ್ಧ ಕರ್ನಾಟಕ ಮೈನ್ಸ್ ಅಂಡ್ ಮಿನರಲ್ಸ್ ಅಧಿನಿಯಮದ ಪ್ರಕಾರ ಯಾವುದೇ ಕ್ರಿಮಿನಲ್ ಕೇಸು ದಾಖಲಿಸಿರುವುದಿಲ್ಲ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 1ನೇ ಎದುರುದಾರರ ವಿರುದ್ಧ ಕರ್ನಾಟಕ ಮೈನ್ಸ್ ಅಂಡ್ ಮಿನರಲ್ಸ್ ಅಧಿನಿಯಮದ ಪ್ರಕಾರ ಕ್ರಿಮಿನಲ್ ಕೇಸು ದಾಖಲಿಸಿ 1ನೇ ಎದುರುದಾರರಿಂದ ದಂಡದ ಹಣವನ್ನು ಪಾವತಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

1/3/18

**[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**